ಈ ರೀತಿ ಗ್ಲೋಬಸ್ ಸಂವೇದನೆಯಿಂದ ಬಳಲುವ ಶೇ.90ರಷ್ಟು ರೋಗಿಗಳಲ್ಲಿ ಆತಂಕ ಮತ್ತು ಖಿನ್ನತೆಯ ಲಕ್ಷಣಗಳಿರುತ್ತದೆ. ದೀರ್ಘಕಾಲದ ಒತ್ತಡದಿಂದ ಈ ರೋಗಿಗಳು ಬಳಲುತ್ತಿರುತ್ತಾರೆ. ಹಾಗೆಯೇ ಗ್ಯಾಸ್ಟ್ರೋಈಸೋಫೇಜಿಯಲ್ ರಿಫ್ಲೆಕ್ಸ್ (Gastroesophegeal reflex) ಅಂದರೆ ಹೊಟ್ಟೆಯಿಂದ ಅನ್ನನಾಳಕ್ಕೆ ಗ್ಯಾಸ್ಟ್ರಿಕ್ ಜ್ಯೂಸ್‌ಗಳ ಹಿಮ್ಮುಖ ಹರಿವಿನಿಂದ ಅತಿಯಾದ ಗ್ಯಾಸ್ಟ್ರೈಟಿಸ್ ಅನ್ನು ಕೂಡ ಈ ರೋಗಿಗಳಲ್ಲಿ ಕಾಣಬಹುದು.

## ಲಕ್ಷಣಗಳೇನು?

ಗಂಟಲು ಒಣಗುವಿಕೆ, ಪದೇ ಪದೇ ಗಂಟಲು ಸರಿಪಡಿಸಿಕೊಳ್ಳುವುದು, ದೀರ್ಘಕಾಲಿಕ ಕೆಮ್ಮು,



ಎದೆ ಉರಿ, ಗಾಬರಿ, ಆಗಾಗ ಏರಿದ ಎದೆಬಡಿತ, ಮಾನಸಿಕ ಖಿನ್ನತೆ, ನಿದ್ರೆಯ ಸಮಸ್ಯೆಗಳು, ಊಟ/ತಿಂಡಿ ನುಂಗುವುದಕ್ಕೆ ಆಗದಿರುವುದು, ತೂಕ ಕಡಿಮೆಯಾಗುವುದು, ಧ್ವನಿಯ ಬದಲಾವಣೆ, ಗಂಟಲಿನಲ್ಲಿ ಗಡ್ಡೆ, ಇತ್ಯಾದಿ ಇದ್ದರೆ ಮತ್ತೊಮ್ಮೆ, ಮಗದೊಮ್ಮೆ ವಿವರವಾದ ದೈಹಿಕ ಪರೀಕ್ಷೆಗಳಾಗಬೇಕು.

## ಕಾಯಿಲೆ ದೃಢೀಕರಣ

ರೋಮ್ ಕ್ರೈಟೀರಿಯಾ ಎಂಬುದನ್ನು ಉಪಯೋಗಿಸಿ, ಈ ಕಾಯಿಲೆಯನ್ನು ದೃಢೀಕರಿಸಲಾಗುತ್ತದೆ.

- ಕನಿಷ್ಠ ಮೂರು ತಿಂಗಳು ಈ ಲಕ್ಷಣಗಳು ಇದ್ದು, ಪ್ರಾರಂಭವಾಗಿ 6 ತಿಂಗಳಾದರೂ ಆಗಿರಬೇಕು. ವಾರಕ್ಕೆ ಒಂದು ಬಾರಿಯಾದರೂ ಈ ಲಕ್ಷಣ ಕಾಣಿಸಬೇಕು.
- ಗಂಟಲಿನಲ್ಲಿ ನಿರಂತರ ಅಥವಾ ಮಧ್ಯಂತರ ಗಡ್ಡೆ ಇರುವ ಸಂವೇದನೆ, ನೋವು ರಹಿತವಾದದ್ದಾಗಿರಬೇಕು.
- ಊಟ/ತಿಂಡಿ ಮಾಡಲು ಸಮಸ್ಯೆ ಇಲ್ಲದಿರುವುದು.
- ಗಂಟಲಿನ ಸಮಸ್ಯೆಗಳು, ಅನ್ನನಾಳದ/ಹೊಟ್ಟೆಯ ಸಮಸ್ಯೆಗಳು, ವಿವಿಧ ಕ್ಯಾನ್ಸರ್‌ಗಳಿಗೆ ಪರೀಕ್ಷೆ ಮಾಡಿ, ಏನೂ ಸಮಸ್ಯೆ ಇಲ್ಲ ಎಂದು ದೃಢೀಕೃತವಾಗಿರಬೇಕು.

## ಚಿಕಿತ್ಸೆ ಏನು?

ಯಾವುದೇ ದೀರ್ಘಕಾಲಿಕ ಕಾಯಿಲೆ ಇರುವವರಿಗೆ ಮೊದಲು ಅವರ ಸಮಸ್ಯೆಯನ್ನು ವೈದ್ಯರು ಅರ್ಥ ಮಾಡಿಕೊಂಡಿದ್ದಾರೆ ಎನ್ನುವ ವಿಶ್ವಾಸ ಮೂಡಬೇಕು. ಆದ್ದರಿಂದ ಒಬ್ಬ ಕುಟುಂಬ ವೈದ್ಯರ ಬಳಿ ಮೊದಲು ತೋರಿಸಿ, ನಂತರ ಅವರು ಹೇಳುವ ತಜ್ಞ ವೈದ್ಯರಲ್ಲಿ (ಕಿವಿಮೂಗು ಗಂಟಲು ತಜ್ಞರು, ಫಿಸೀಷಿಯನ್ ಇತ್ಯಾದಿ) ಸೂಕ್ತ ಪರೀಕ್ಷೆಗಳನ್ನು ಮಾಡಿ, ಜೀವಕ್ಕೆ ಅಪಾಯ ಇರುವ, ಗಂಭೀರವಾದ ಕಾಯಿಲೆಗಳಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು. ನಂತರ ವೈದ್ಯರು ನೀಡುವ ಔಷಧಿಯನ್ನು ನಿಯಮಿತವಾಗಿ ತೆಗೆದುಕೊಳ್ಳಬೇಕು. ಮನೋವೈದ್ಯರು/ಮನಃಶಾಸ್ತ್ರಜ್ಞರಲ್ಲಿ ಆಪ್ತ ಸಮಾಲೋಚನೆ ಪಡೆದು, ಸಾಮಾನ್ಯವಾಗಿ ಇದರೊಂದಿಗೆ ಕಾಣುವ ಆತಂಕ/ಖಿನ್ನತೆಗಳಿಗೆ ಚಿಕಿತ್ಸೆ ಪಡೆಯಬೇಕು. ಯೋಗ, ಪ್ರಾಣಾಯಾಮದಂತಹ ವ್ಯಾಯಾಮಗಳು ಕೂಡ ಪರಿಣಾಮಕಾರಿಯಾಗಬಲ್ಲದು.

## ಇತಿಹಾಸ

ಸುಮಾರು 2500 ವರ್ಷಗಳ ಹಿಂದೆಯೇ ಹಿಪ್ಪೊಕ್ರಟಿಸ್ ಈ 'ಗ್ಲೋಬಸ್ ಸೆನ್ಸೇಷನ್' ಬಗ್ಗೆ ತಿಳಿಸಿದ್ದ. ಅವನ ಪ್ರಕಾರ ಹಿಸ್ಟೀರಿಯಾ (ಸನ್ನಿ) ಆದ ಮಹಿಳೆಯರಲ್ಲಿ ಈ ಗಂಟಲಿನಲ್ಲಿ ಗಂಟು ಇರುವ ಅನುಭವ ಕಾಣಿಸಿಕೊಳ್ಳುತ್ತಿತ್ತು. ಶತಮಾನಗಳ ಹಿಂದೆ, ಹಿಸ್ಟೀರಿಯಾ ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಕಾಯಿಲೆಯಾಗಿತ್ತು. ಮದುವೆಯಾಗದ, ಮಕ್ಕಳಾಗದ ಮಹಿಳೆಯರಲ್ಲಿ ಗರ್ಭಕೋಶ ದೇಹದ ಇತರ ಭಾಗಗಳಿಗೆ ಹೋಗಿ, ಅವರ ಭಾವನಾತ್ಮಕ ನಿಯಂತ್ರಣ ಕಳೆದುಕೊಳ್ಳುವಂತೆ ಮಾಡುತ್ತದೆ ಎಂಬ ವಿಚಿತ್ರ ನಂಬಿಕೆ ಇತ್ತು. ಈ ಗ್ಲೋಬಸ್ ಸೆನ್ಸೇಷನ್ ಕೂಡ ಇದರ ಭಾಗವಾಗೇ ಹತ್ತೊಂಬತ್ತನೇ ಶತಮಾನದ ತನಕ ನೋಡುತ್ತಿದ್ದರು.

1794ರಲ್ಲಿ ಪ್ರಕಟವಾದ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲೂ, 'ಗ್ಲೋಬಸ್ ಹಿಸ್ಟಿರಿಕಸ್' ಎಂದರೆ ಗಂಟಲಿನ ಗಡ್ಡೆಯಂತೆ, ಉಸಿರುಗಟ್ಟಿಸುವ ಸಂವೇದನೆ, ಸನ್ನಿ/ಉನ್ಮಾದದ ವ್ಯಕ್ತಿಗಳಲ್ಲಿ ಕಾಣಿಸುವ ಎಂದೇ ಕೊಡಲಾಗಿತ್ತು. 1707ರಲ್ಲಿ ಜಾನ್ ಪರ್ಸೆಲ್ ಎಂಬುವವನು ಇದಕ್ಕೆ 'ಗ್ಲೋಬಸ್ ಹಿಸ್ಟಿರಿಕಸ್' ಎಂಬ ಹೆಸರನ್ನು ಕೊಟ್ಟು ಮತ್ತಷ್ಟು ವಿವರವಾಗಿ ಇದರ ಬಗ್ಗೆ ತಿಳಿಸಿದ. ಹಿಸ್ಟಿರಿಕ್ ಫಿಟ್ಸ್‌ನಿಂದ ಹೀಗಾಗುತ್ತದೆಂದೂ, ಗಂಟಲಿನಲ್ಲಿರುವ ಕುತ್ತಿಗೆಯ ಬಿಗಿದ ಸ್ನಾಯುಗಳು ಥೈರಾಯ್ಡ್ ಕಾರ್ಟಿಲೇಜ್ ಮೇಲೆ ಒತ್ತಡ ಹೇರಿದಾಗ ಇದು ಕಾಣಿಸುತ್ತದೆ ಎಂದು ವಿವರಣೆ ನೀಡಿದ.

ಪರ್ಸೆಲ್ ಈ ರೀತಿಯ ರೋಗಿಗಳನ್ನು ಅಧ್ಯಯನ ಮಾಡಿ, ಮಹತ್ವದ ಮಾಹಿತಿ ನೀಡಿದ. ಈ ರೋಗಿಗಳಿಗೆ ತಮ್ಮ ಗಂಟಲಿನ ಹೊರಭಾಗದಿಂದ ಚೆಂಡನ್ನು ಒತ್ತಿದರೆ, ಹೇಗೆ ಸಂವೇದನೆ ಆಗುತ್ತದೋ ಹಾಗೆ ಆಗುತ್ತದೆ. ಕೆಲವೊಮ್ಮೆ ಅವರ ಗಂಟಲಿನ ಒಳಗೆ ಕೋಲೊಂದನ್ನು ಹಾಕಿ ಹಿಂಸೆ ನೀಡಿದಂತೆ ಭಾಸವಾಗುತ್ತದೆ. ಹಾಗೆಯೇ ಸ್ವಲ್ಪ ರೋಗಿಗಳಲ್ಲಿ, ಹಗ್ಗ ಹಾಕಿ ಗಂಟಲು ಸುತ್ತ ಸುತ್ತಿದ ಹಾಗಾಗುತ್ತದೆ. ಅವನ ಪ್ರಕಾರ, ಇದು ಕೇವಲ ರೋಗಿಯ ಆಧಾರರಹಿತ ಕಲ್ಪನೆಗಳಾಗಿರದೆ, ವಾಸ್ತವವಾಗಿ ಅನುಭವಿಸುವ ಸಂವೇದನೆಗಳಾಗಿದ್ದವು.

ಸಾಕಷ್ಟು ಅಧ್ಯಯನಗಳ ನಂತರ, 1968ರಲ್ಲಿ ಕೆ.ಜಿ. ಮಲ್ಕೋಂಸನ್ ಎಂಬ ವೈದ್ಯ ಸಂಶೋಧಕ ಈ ಮೇಲಿನ ಹೆಸರನ್ನು ಬದಲಿಸಿ, 'ಗ್ಲೋಬಸ್ ಫ್ಯಾರಿಂಜಿಯಸ್' ಎಂಬ ಹೊಸ ಹೆಸರು ಕೊಟ್ಟ. ಕೇವಲ ಹಿಸ್ಟೀರಿಯಾ ಇರುವ ಮಾನಸಿಕ ರೋಗಿಗಳಿಗೆ ಅಥವಾ ಮಹಿಳೆಯರಿಗೆ ಮಾತ್ರ ಈ ಸಮಸ್ಯೆ ಸೀಮಿತವಲ್ಲವೆಂದು ಸಾಬೀತುಪಡಿಸಿದ.